# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 813 (681) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 12.12.2023 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಏಕಗವಾಕ್ಷಿ ಸಮಿತಿಯ ಮುಖಾಂತರ ಎಷ್ಟು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಗಳ ಅನುಮತಿ ನೀಡಲಾಗಿದೆ; | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ SLSWCC ಮತ್ತು SHLCC ಸಮಿತಿ ಸಭೆಗಳಲ್ಲಿ ಒಟ್ಟು 1302 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. |
| ಆ | ಹೊಸದಾಗಿ ಸ್ಥಾಪಿತವಾದ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಯಿಂದ ಸರ್ಕಾರದ ಬೊಕ್ಕಸಕ್ಕೆ ಬಂದ ಆದಾಯವೆಷ್ಟು; | ಕೈಗಾರಿಕೆಗಳ ಸ್ಥಾಪನೆಯಿಂದ ರಾಜ್ಯದಲ್ಲಿ ಉದ್ಯೋಗ ಸೃಜನೆಯಾಗುತ್ತದೆ ಹಾಗೂ ಸ್ಥಳೀಯವಾಗಿ ಸಾಮಾಜಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತದೆ.<br>2022-23ನೇ ಸಾಲಿನಲ್ಲಿ ಈ ಯೋಜನೆಗಳಿಂದ ಸರ್ಕಾರಕ್ಕೆ SGST ತೆರಿಗೆ ರೂಪದಲ್ಲಿರೂ.2051 ಕೋಟಿ ಆದಾಯವು ಬಂದಿರುತ್ತದೆ. |
| ಇ | ಏಕಗವಾಕ್ಷಿ ಸಮಿತಿಯ ಮುಖಾಂತರ ಪರವಾನಗಿ ಪಡೆದು ಕಳೆದ ಮೂರು ವರ್ಷಗಳಲ್ಲಿ ಎಷ್ಟು ಹೊಸ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ರಾಜ್ಯದಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಗೊಳಿಸಿದೆ; | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಏಕಗವಾಕ್ಷಿ ಸಮಿತಿಯ ಮುಖಾಂತರ ಅನುಮೋದನೆ ಪಡೆದ (SLSWCC ಮತ್ತು SHLCC) 83 ಯೋಜನೆಗಳು ಅನುಷ್ಠಾನಗೊಂಡಿದ್ದು, ಕಾರ್ಯಾಚರಣೆಯನ್ನು ಪ್ರಾರಂಭಗೊಳಿಸಿವೆ. |
| ಈ | ಪರವಾನಗಿ ಪಡೆದು ಪ್ರಾರಂಭಗೊಳಿಸದಿರುವ ಕೈಗಾರಿಕೆಗಳೆಷ್ಟು; ಇವುಗಳ ಕಾರ್ಯಾಚರಣೆಯನ್ನು ಪ್ರಾರಂಭಗೊಳಿಸದಿರಲು ಕಾರಣಗಳೇನು; ಅವುಗಳನ್ನು ಆದ್ಯತೆಯ ಮೇಲೆ ಕಾರ್ಯಾಚರಣೆ ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | SLSWCC ಮತ್ತು SHLCC ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಅನುಮತಿ ಪಡೆದ ಇನ್ನು 1283 ಕಂಪನಿಗಳು ಕಾರ್ಯಾರಂಭ ವಿವಿಧ ಹಂತಗಳಲ್ಲಿ ಇರುತ್ತದೆ. ಅನುಷ್ಠಾನದಲ್ಲಿ ವಿಳಂಬವಾಗಿರುವುದಕ್ಕೆ ಮುಖ್ಯವಾಗಿ ಕೋವಿಡ್ ನಂತರದ ಆರ್ಥಿಕ ಹಾಗೂ ಮಾರುಕಟ್ಟೆ ಪರಿಣಾಮಗಳಿರುತ್ತವೆ.<br>ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:<br>1. ವಲಯವಾರು ಕೈಗಾರಿಕಾ ನೀತಿಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| | | 2. EV Policy ಗೆ ತಿದ್ದುಪಡಿ ತರಲಾಗಿದೆ.<br>3. ರಾಜ್ಯದಲ್ಲಿ ಸುಲಲಿತ ವ್ಯವಹಾರಗಳಿಗೆ ವಿವಿಧ ಸುಧಾರಣೆಗಳನ್ನು ಸಂಬಂಧಿಸಿದ ಇಲಾಖೆಗಳ ಮೂಲಕ ಜಾರಿಗೆ ತರಲಾಗಿದೆ.<br>4. ಕಂಪನಿಗಳು ತ್ವರಿತವಾಗಿ ಕಾರ್ಯಾರಂಭ ಮಾಡಲು ರಾಜ್ಯ ಸರ್ಕಾರವು Affidavit Based Clearance (ABC) ಯನ್ನು ಜಾರಿಗೊಳಿಸಿದೆ. |
| ಉ | ಹೊಸದಾಗಿ ಸ್ಥಾಪಿತವಾದ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸ್ಥಾಪನೆಯಿಂದ ಎಷ್ಟು ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ; ಸ್ಥಳೀಯರಿಗೆ ಎಷ್ಟು ಪ್ರತಿಶತ ಉದ್ಯೋಗವನ್ನು ಆದ್ಯತೆ ಮೇಲೆ ನೀಡಿ ನೇಮಕಗೊಳಿಸಲಾಗಿದೆ? | ಈ 83 ಯೋಜನೆಗಳಿಂದ ಒಟ್ಟು 60,354 ಉದ್ಯೋಗ ಸೃಷ್ಟಿಯಾಗಿದೆ.<br>ಹೊಸ ಕೈಗಾರಿಕಾ ನೀತಿ 2020-25 ರನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಾವಕಾಶವನ್ನು ಶೇ. 100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗದಲ್ಲಿ ಶೇ. 70 ರಷ್ಟು ಉದ್ಯೋಗಾವಕಾಶವನ್ನು ಕನ್ನಡಿಗರಿಗೆ/ ಸ್ಥಳೀಯರಿಗೆ ನೀಡುವ ನಿಬಂಧನೆಯಿರುತ್ತದೆ. |

ಸಿಐ 331 ಎಸ್‌ಪಿಐ 2023

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು